

ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ದೇವರಾಜ ಅರಸ್ ಮಾರ್ಕೆಟ್, ಹಾಸನ. ☎ 264825

ವಾರ್ಷಿಕ ಬಡ್ಡಿ ದರದ ವಿವರಗಳು	ಸಾಮಾನ್ಯರಿಗೆ %	ಹಿರಿಯ ನಾಗರಿಕರಿಗೆ %
* 1 ವರ್ಷದಿಂದ 3 ವರ್ಷಗಳವರೆಗೆ	10.5	11
* 181ದಿನಗಳಿಂದ 365 ದಿನಗಳವರೆಗೆ	8	8.5
* 91 ದಿನಗಳಿಂದ 180 ದಿನಗಳವರೆಗೆ	7	7.5
* 31 ದಿನಗಳಿಂದ 90 ದಿನಗಳವರೆಗೆ	6	6.5
* 90 ತಿಂಗಳುಗಳಲ್ಲಿ ಠೇವಣಿ ಮೊತ್ತ ದ್ವಿಗುಣ		

-ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

40ನೇ ವರ್ಷದಲ್ಲಿ

ಜನತಾ ಮಾಧ್ಯಮ

ಸಂಪಾದಕ : ಆರ್.ಪಿ.ವೆಂಕಟೇಶಮೂರ್ತಿ
ವ್ಯವಸ್ಥಾಪಕ ಸಂಪಾದಕ : ಎಸ್.ಎನ್.ಮಂಜುನಾಥದತ್ತ

PREMIER MARKETING
#817/A,Opp: Mallige Residency,Govt.High School Field,Road,Hassan.
Ph:9620621333
9448742971
9844090035
08172-233509
Dr.Aquaguard
RO+UV+TDS Control-ler Water Purifier & Water Softner

8,500 ಭಾರತೀಯ ರೈಲ್ವೆ ನಿಲ್ದಾಣಗಳಲ್ಲಿ ಉಚಿತ ವೈ-ಫೈ

ಗ್ರಾಮೀಣ ಮತ್ತು ಕುಗ್ರಾಮದಲ್ಲಿರುವ ರೈಲ್ವೆ ನಿಲ್ದಾಣಗಳು ಸೇರಿದಂತೆ ದೇಶಾದ್ಯಂತ ಇರುವ 8,500 ನಿಲ್ದಾಣಗಳಲ್ಲಿ ಸುಮಾರು 700 ಕೋಟಿ ರೂ. ವೆಚ್ಚದಲ್ಲಿ ವೈಫೈ ಸೌಲಭ್ಯ ಒದಗಿಸಲು ರೈಲ್ವೆ ಇಲಾಖೆ ಮುಂದಾಗಿದೆ. ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಡಿಜಿಟಲ್ ಇಂಡಿಯಾ ಭಾಗವಾಗಿ ಸದ್ಯ 216 ಪ್ರಮುಖ ರೈಲು ನಿಲ್ದಾಣಗಳಲ್ಲಿ ಉಚಿತ ವೈಫೈ ಸೇವೆಗಳನ್ನು ನಿಯೋಜಿಸಲಾಗಿದ್ದು, ಉಚಿತ ಇಂಟರ್‌ನೆಟ್ ಸೇವೆಯನ್ನು ಪ್ರಯಾಣಿಕರು ಪಡೆಯುತ್ತಿದ್ದಾರೆ.

ನಿತೀಶ್‌ಗೆ ಥ್ಯಾಂಕ್ಯೂ ಹೇಳಿದ ಲಾಲೂ ಪುತ್ರ ತೇಜಸ್ವಿ

ಇತ್ತ ತಮ್ಮ ತಂದೆ ಲಾಲೂ ಪ್ರಸಾದ್ ಯಾದವ್ ಅವರಿಗೆ ನ್ಯಾಯಾಲಯ 3.5 ವರ್ಷ ಜೈಲು ಶಿಕ್ಷೆ ವಿಧಿಸುತ್ತಿದ್ದಂತೆಯೇ ಅತ್ತ ಪಾಟ್ನಾದಲ್ಲಿ ಲಾಲೂ ಪುತ್ರ ತೇಜಸ್ವಿ ಯಾದವ್, ಬಿಹಾರ ಸಿಎಂ ನಿತೀಶ್ ಕುಮಾರ್ ಅವರಿಗೆ ಥ್ಯಾಂಕ್ಸ್ ಹೇಳುವ ಮೂಲಕ ವ್ಯಂಗ್ಯವಾಡಿದ್ದಾರೆ. ಅತ್ತ ರಾಂಚಿ ವಿಶೇಷ ನ್ಯಾಯಾಲಯದ ತೀರ್ಪು ಹೊರ ಬೀಳುತ್ತಿದ್ದಂತೆಯೇ ಇತ್ತ ಟ್ವಿಟ್ಟರ್‌ನಲ್ಲಿ ಅವರು ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್‌ಗೆ ಓವೈಸಿ ಬಿಗ್ ಶಾಕ್

ಈ ಬಾರಿಯ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಮುಸ್ಲಿಂ ಮತಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಹೈದರಾಬಾದ್ ಸಂಸದ ಅಸಾದುದ್ದೀನ್ ಓವೈಸಿ ನೇತೃತ್ವದ ಎಐಎಂಐಎಂ ಪಕ್ಷ ಚಿಂತನೆ ನಡೆಸಿರುವುದು ಕಾಂಗ್ರೆಸ್‌ನಲ್ಲಿ ಕೊಂಚ ತಲ್ಲಣ ಉಂಟು ಮಾಡಿದೆ. ಕರ್ನಾಟಕ ರಾಜಕೀಯಕ್ಕೆ ಎಂಟ್ರಿಯಾಗುವುದಾಗಿ ಈ ಹಿಂದೆ ಹೇಳಿಕೊಂಡಿದ್ದ ಓವೈಸಿ ಅದರಂತೆ ತಮ್ಮ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಪ್ರಕ್ರಿಯೆ ಪ್ರಾರಂಭಿಸಿದ್ದಾರೆ.

ಜನತಾಮಾಧ್ಯಮ ಬೆಳಗಿನ ದೈನಿಕ JANATHAMADHYAMA KARKAN. RNI 41566. ಸಂಪುಟ : 41 ಸಂಚಿಕೆ :47 ಸೋಮವಾರ ಜ.8, 2018 ದೂರವಾಣಿ : 268494 ಪುಟ-4 ರೂ.2-00 NO. HSN-761/ 2018-20

ಅಕ್ರಮ ಮದ್ಯ ಸಾಗಣೆ : ಯುವಕನ ಬಂಧನ

ಹಾಸನ : ಅಕ್ರಮವಾಗಿ ಮದ್ಯ ಸಾಗಿಸುತ್ತಿದ್ದ ವ್ಯಕ್ತಿಯೊಬ್ಬನನ್ನು ಪೊಲೀಸರು ಭಾನುವಾರ ಬಂಧಿಸಿದ್ದು, ಸುಮಾರು 2960 ರೂ. ಬೆಲೆಯ ಮದ್ಯ ವಶಪಡಿಸಿಕೊಂಡಿದ್ದಾರೆ.

ತಾಲ್ಲೂಕಿನ ದುದ್ದ ಡಾಬಾ ಹೋಟೆಲ್‌ನ ಸಮೀಪ ಮದ್ಯದ ಬಾಟಲಿಗಳನ್ನು ಚೀಲದಲ್ಲಿ ತೆಗೆದುಕೊಂಡು ಹೋಗುತ್ತಿದ್ದಾರೆಂಬ ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರು, ಅರಸೀಕೆರೆ ತಾಲ್ಲೂಕು ಗಂಡಸಿ ಹೋಬಳಿಯ ಬಾಗೇಶಪುರ ಗ್ರಾಮದ ರಾಮಚಂದ್ರ ಬಿನ್ ರಂಗಸ್ವಾಮಿ(24) ಎಂಬುವವನನ್ನು ಬಂಧಿಸಿದ್ದಾರೆ. ದುದ್ದ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇತ್ತೀಚೆಗೆ ಹೆಚ್ಚುತ್ತಿರುವ ಮದ್ಯ ಸಾಗಣೆ ಪ್ರಕರಣ ನಿಯಂತ್ರಣಕ್ಕೆ ಪೊಲೀಸರು ಯತ್ನಿಸುತ್ತಿದ್ದಾರೆ.

‘ಹಿಂದೂ ಕಾಳಜಿ ಇದ್ದರೆ ಗೋಹತ್ಯೆ ನಿಷೇಧಿಸಲಿ’

ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಯೋಗಿ ಆದಿತ್ಯನಾಥ್ ಸವಾಲು

ಬೆಂಗಳೂರು : ಚುನಾವಣೆಗಳು ಹತ್ತಿರವಾಗುತ್ತಿರುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಹಿಂದುತ್ವ ನೆನಪಾಗುತ್ತಿದೆ. ಹಿಂದೂಗಳ ಮೇಲೆ ಅವರಿಗೆ ನಿಜವಾಗಲೂ ಪ್ರೀತಿ, ಕಾಳಜಿ ಇದ್ದರೆ ಗೋಹತ್ಯೆಯನ್ನು ನಿಷೇಧಿಸಲಿ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸವಾಲು ಹಾಕಿದರು.

ನಗರದ ವಿಜಯನಗರ ಹಾಗೂ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರಗಳಲ್ಲಿ ಭಾನುವಾರ ನಡೆದ ಬಿಜೆಪಿಯ ಪರಿವರ್ತನಾ ಯಾತ್ರೆಯಲ್ಲಿ ಮಾತನಾಡಿದ ಅವರು, ಗುಜರಾತ್ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್ ಅಧ್ಯಕ್ಷ ರಾಹುಲ್ ಗಾಂಧಿ ಅವರಿಗೆ ದೇವಸ್ಥಾನಗಳು ಹಾಗೂ ಮಂದಿರಗಳು ನೆನಪಾಗುತ್ತದೆ. ಸಿದ್ದರಾಮಯ್ಯನವರು ಚುನಾವಣೆಗಳು ಹತ್ತಿರವಾಗುತ್ತಿದ್ದಂತೆ ಹಿಂದೂಗಳು ಹಾಗೂ ಹಿಂದುತ್ವದ ಸ್ಮರಣೆ ಮಾಡುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.

ಹಿಂದುತ್ವ ಎಂಬುದು ಒಂದು ಉತ್ಕೃಷ್ಟ ಜೀವನ ಶೈಲಿ. ಯಾವುದೇ ಜಾತಿ ಮತ ಸಂಸತ್‌ಗೆ ಸೇರಿದ್ದಲ್ಲ. ಅದು ಜೀವನ ಕ್ರಮ. ಇದನ್ನು ಸಿದ್ದರಾಮಯ್ಯ ಅರ್ಥ ಮಾಡಿಕೊಳ್ಳಬೇಕು. ಗೋಹತ್ಯೆ ಪರ ವಕಾಲತ್ತು ವಹಿಸದೆ ಗೋ ಹತ್ಯೆ ನಿಷೇಧಿಸಲಿ ಎಂದು ಹೇಳಿದರು.

ರಾಜ್ಯದ ಕಾಂಗ್ರೆಸ್ ಸರ್ಕಾರ ಕಾಂಗ್ರೆಸ್ ಪಕ್ಷಕ್ಕೆ ಎಟಿಎಂ ಇದ್ದಂತೆ. ದೇಶದ ಯಾವ ದೊಡ್ಡ ರಾಜ್ಯದಲ್ಲೂ ಕಾಂಗ್ರೆಸ್ ಆಡಳಿತದಲ್ಲಿಲ್ಲ. ಕಾಂಗ್ರೆಸ್ ಪಕ್ಷಕ್ಕೆ ರಾಜ್ಯದಿಂದಲೇ ಆರ್ಥಿಕ ಪೋಷಣೆ. ಸಿದ್ದರಾಮಯ್ಯ ಸರ್ಕಾರ ಕಾಂಗ್ರೆಸ್‌ನ ಎಟಿಎಂ ಎಂದು ವಾಗ್ದಾಳಿ ನಡೆಸಿದರು.

ಸಮಾವೇಶದಲ್ಲಿ ಕೇಂದ್ರ ಸಚಿವರುಗಳಾದ ಅನಂತಕುಮಾರ್, ಡಿ.ವಿ.ಸದಾನಂದಗೌಡ, ವಿಪಕ್ಷ ನಾಯಕರಾದ ಜಗದೀಶ್ ಶೆಟ್ಟರ್, ಈಶ್ವರಪ್ಪ, ಆರ್.ಅಶೋಕ್, ಸಿ.ಟಿ.ರವಿ, ಸಂಸದರಾದ ಶೋಭ ಕರಂದ್ಲಾಜೆ, ಪಿ.ಸಿ.ಮೋಹನ್ ಇನ್ನಿತರರು ಉಪಸ್ಥಿತರಿದ್ದರು.

ಸಾವಯವ ರೈತರ ಸಂತೆಯಲ್ಲಿ ಭರ್ಜರಿ ಮಾರಾಟ

ಹಾಸನ: ನಗರದ ಆರ್.ಸಿ. ರಸ್ತೆಯ ಎನ್.ಸಿ.ಸಿ. ಕಛೇರಿ ಮುಂದೆ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಸಾವಯವ ಸಂತೆಯಲ್ಲಿ ರೈತರಿಂದ ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುವ ವ್ಯವಸ್ಥೆ ಕಲ್ಪಿಸಲಾಗಿತ್ತು. ರೈತರು ಬೆಳೆದ ಎಲ್ಲಾ ಉತ್ಪನ್ನಗಳು ಭರ್ಜರಿ ಮಾರಾಟವಾಗಿ ಸಾವಿರಾರು ರೂ.ಗಳ ವಹಿವಾಟು ನಡೆಯಿತು.

ಹಾಸನ ಮತ್ತು ಕೊಡಗು ಜಿಲ್ಲೆಗಳ ಸಾವಯವ ಕೃಷಿಕರ ಒಕ್ಕೂಟ, ಪರಿಶುದ್ಧ ಆಹಾರ ಆರ್ಗ್ಯಾನಿಕ್ ಫಾರ್ಮರ್ ಅಸೋಸಿಯೇಷನ್, ಸ್ವದೇಶಿ ಜಾಗರಣಾ ಮಂಚ್ ಮತ್ತು ಅವನಿ ಆರ್ಗ್ಯಾನಿಕ್ಸ್ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಲಾಗಿದ್ದ ಈ ಸಾವಯವ ಸಂತೆಯಲ್ಲಿ 50ಕ್ಕೂ ಹೆಚ್ಚು ರೈತರು ತಮ್ಮ ಸಾವಯವ ಬೆಳೆಗಳನ್ನು ತಂದು ಮಾರಾಟ ಮಾಡಿದರು.

ಸಂತೆಯಲ್ಲಿ ಸಾವಯವದಲ್ಲಿ ಬೆಳೆದ ತಾಜಾ ಸೊಪ್ಪುಗಳು, ಹಣ್ಣು ತರಕಾರಿಗಳು, ಮಲೆನಾಡಿನ ವಿಶೇಷ ತರಕಾರಿಗಳು, ಅಕ್ಕಿ, ರಾಗಿ, ಬೇಳೆ, ಸಿರಿಧಾನ್ಯಗಳು, ಹಸುವಿನ ಹಾಲು, ಬೆಣ್ಣೆ, ತುಪ್ಪ ಹಾಗೂ ಕುರುಕಲು ತಿಂಡಿಗಳು ಮಾರಾಟವಾದವು. ಗ್ರಾಹಕರು ಇವುಗಳನ್ನು ಮುಗಿ ಬಿದ್ದು ಖರೀದಿಸಿದರು.

ರಿಂಗ್ ರಸ್ತೆ ಕಾಮಗಾರಿಗೆ ಶಾಸಕ ಚಾಲನೆ

ಹಾಸನ : ನಗರದ ಸಾಲಗಾಮೆ ರಸ್ತೆಯ ಸುಭೇದಾರ್ ನಾಗೇಶ್ ವೃತ್ತದ ರಿಂಗ್ ರಸ್ತೆಯ ಕಾಮಗಾರಿಗೆ ಶಾಸಕ ಹೆಚ್.ಎಸ್. ಪ್ರಕಾಶ್ ಭಾನುವಾರ ಗುದ್ದಲಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಸಂಜೀವಿನಿ ಆಸ್ಪತ್ರೆ ಮುಂಭಾಗದಿಂದ ಸಾಲಗಾಮೆ ರಸ್ತೆಯ ಮಹಾವೀರ ಪೆಟ್ರೋಲ್ ಬಂಕ್‌ವರೆಗೂ 4 ಕೋಟಿ 90 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಮಾಡಲಾಗುತ್ತಿದೆ. ಅಲ್ಲದೆ ಸರಕಾರಿ ವಿಜ್ಞಾನ ಕಾಲೇಜು ಕಾಂಪೌಂಡನ್ನು ಕೆಡವಿ 10 ಅಡಿ ಹಿಂದಕ್ಕೆ ಹಾಕಲಾಗುವುದು ಎಂದರು.

ದಾಸರಕೊಪ್ಪಲಿನಿಂದ ಆರ್.ವಿ. ಕಲ್ಯಾಣ ಮಂಟಪದವರೆಗಿನ ರಸ್ತೆಯನ್ನು 7 ಮೀಟರ್ ಅಗಲಗೊಳಿಸಲಾಗುವುದು. ಈಗಾಗಲೇ ಇದಕ್ಕೆ ಟೆಂಡರ್ ಪ್ರಕ್ರಿಯೆ ಆರಂಭವಾಗಿದೆ. ತೇಜೂರಿನಿಂದ ಆಚಗೌಡನಹಳ್ಳಿವರೆಗೂ 60 ಲಕ್ಷ ರೂ. ವೆಚ್ಚದಲ್ಲಿ ಕಾಮಗಾರಿ ಮಾಡಲಾಗುವುದು ಎಂದರು.

ಬ್ರಹ್ಮದೇವರಹಳ್ಳಿಯಿಂದ ಹರದನಹಳ್ಳಿ ಮೂಲಕ ಪುರದಮ್ಮ ದೇವಸ್ಥಾನದವರೆಗೂ 3 ಕೋಟಿ ರೂ. ವೆಚ್ಚದ ರಸ್ತೆ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದ್ದು, ಕಾಮಗಾರಿ ಪ್ರಾರಂಭಗೊಂಡಿದೆ. ಶಂಖದಿಂದ ಹೊಸಹಳ್ಳಿ ಮೂಲಕ ಬೇಲೂರಿಗೆ ಹೋಗುವ ರಸ್ತೆಯನ್ನು 2 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ. ಡೈರಿ ವೃತ್ತದಿಂದ ಜವರಪಟ್ಟಣದವರೆಗೂ 4 ಕೋಟಿ 60 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಮಾಡಲಾಗುವುದು. ಗಡಿಭಾಗ ಬೇಲೂರು ರಸ್ತೆಯ ಗದ್ದವಳ್ಳಿ, ತಣ್ಣೀರುಹಳ್ಳ ವೃತ್ತದವರೆಗೂ ಡಾಂಬರೀಕರಣ ಮಾಡಲು 5 ಕೋಟಿ ರೂ. ವೆಚ್ಚ ಮಾಡಲಾಗುತ್ತಿದೆ. ಫೆಬ್ರವರಿ 28ರ ಒಳಗೆ ಎಲ್ಲಾ ಕೆಲಸ ಮುಗಿಸಬೇಕಾಗಿದೆ ಎಂದರು.

ಚನ್ನಪಟ್ಟಣ, ಸತ್ಯವಂಗಲ, ಹುಣಸಿನಕೆರೆಗಳ ವೀಕ್ಷಣೆ : ಆರ್ಥಿಕ ಮಿತವ್ಯಯದ ಸಲಹೆ

ಹಾಸನ : ಬೆಂಗಳೂರಿನ ಬಿ.ಡಬ್ಲ್ಯೂ.ಎಸ್.ಎಸ್.ಬಿ.ಯ ಮುಖ್ಯ ಇಂಜಿನಿಯರ್ ಹೆಚ್.ಎಂ.ರವೀಂದ್ರ ಹಾಗೂ ಉಪ ಮುಖ್ಯ ಇಂಜಿನಿಯರ್ ವಿ.ಸಿ. ಕುಮಾರ್ ಅವರುಗಳು ಭಾನುವಾರ ಬೆಳಿಗ್ಗೆ ನಗರಕ್ಕೆ ಆಗಮಿಸಿ ಕೆರೆಗಳ ಪುನಶ್ಚೇತನಕ್ಕೆ ಸಂಬಂಧಿಸಿದಂತೆ ನಗರದ ಚನ್ನಪಟ್ಟಣ ಕೆರೆ, ಹುಣಸಿನಕೆರೆ ಮತ್ತು ಸತ್ಯವಂಗಲ ಕೆರೆಗಳ ಸ್ಥಳ ವೀಕ್ಷಣೆ ಮಾಡಿ ಕೆಲವು ಆರ್ಥಿಕ ಮಿತವ್ಯಯದ ಉಪಯುಕ್ತ ಸಲಹೆಗಳನ್ನು ನೀಡಿದರು.

ಮೊದಲನೆಯದಾಗಿ ಚನ್ನಪಟ್ಟಣ ಕೆರೆ ಸ್ಥಳ ವೀಕ್ಷಣೆ ಮಾಡಿದ ಹೆಚ್.ಎಂ. ರವೀಂದ್ರ ಮತ್ತು ವಿ.ಸಿ.ಕುಮಾರ್ ಅವರು, ಕೆರೆ ಡಿ-ನೋಟಿಫಿಕೇಶನ್ ಆಗಿರುವುದರಿಂದ, ಡಿ-ನೋಟಿಫಿಕೇಶನ್ ರದ್ದುಪಡಿಸದೆ ಚನ್ನಪಟ್ಟಣ ಕೆರೆ ಪುನಶ್ಚೇತನ ಅಸಾಧ್ಯ ಎಂದರು.

ನಂತರ ಹುಣಸಿನಕೆರೆ ವೀಕ್ಷಿಸಿದ ಮೇಲ್ಕಂಡ ಮುಖ್ಯ ಇಂಜಿನಿಯರ್‌ಗಳು, ಕೆರೆಯ ಪಶ್ಚಿಮದಲ್ಲಿರುವ ಕೋಡಿಯಂತೆ ಕೆರೆಯ ಪೂರ್ವ ಭಾಗದ ಮೊದಲ ಕೋಡಿಯ ಸಮೀಪದಲ್ಲೇ ಅಷ್ಟೇ ಎತ್ತರದ ಪ್ರತ್ಯೇಕ ಕೋಡಿಯನ್ನು ನಿರ್ಮಿಸುವುದರಿಂದ ಹಾಗೂ ಪೂರ್ವ ಭಾಗದಲ್ಲಿರುವ ಮೊದಲ ಕೋಡಿಯನ್ನು ತಗ್ಗಿಸುವುದರಿಂದ ಮಲಿನ ನೀರು ಸರಾಗವಾಗಿ ಹರಿಯುತ್ತದೆ ಎಂದು ತಿಳಿಸಿದರು.

ವಿಶ್ವನಾಥನಗರದಿಂದ ಸೇತುವೆ ಮೂಲಕ ರಾಜ್‌ಕುಮಾರ್ ನಗರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ಎಡಭಾಗದಲ್ಲಿ ವಿಶಾಲವಾಗಿರುವ ಕೆರೆಯಂಗಳದಲ್ಲಿ ಈಗಾಗಲೇ ಮನೆಗಳು, ಸಾಮಿಲ್, ಇತ್ಯಾದಿ ಅಂಗಡಿ ಮುಂಗಟ್ಟುಗಳನ್ನು ನಿರ್ಮಿಸಿಕೊಳ್ಳಲಾಗಿದೆ. ಇಲ್ಲಿಂದ ಬರುವ ಮಲಿನ ನೀರು ಮತ್ತು ತ್ಯಾಜ್ಯ ವಸ್ತುಗಳು ನೇರವಾಗಿ ಕೆರೆಯನ್ನು ಸೇರುತ್ತಿವೆ. ಇದರಿಂದಾಗಿ ಕೆರೆಯ ನೀರು ಕೊಳೆತು ದುರ್ವಾಸನೆಗೆ ಕಾರಣವಾಗಿದೆ. ಈ ಭಾಗದ ನೀರನ್ನು ಪ್ರತ್ಯೇಕವಾಗಿ ನಿರ್ಮಿಸುವ ಪೂರ್ವ ಭಾಗದ ಕೋಡಿಗೆ ಹರಿಯುವಂತೆ ಮಾಡಿದರೆ ಗಲೀಜು ನೀರನ್ನು ನಿಯಂತ್ರಿಸಿದಂತಾಗುತ್ತದೆ ಎಂದು ಸಲಹೆ ನೀಡಿದರು.

ನಂತರ ಸತ್ಯವಂಗಲ ಕೆರೆ ವೀಕ್ಷಣೆಗೆ ತೆರಳಿದ ಇಂಜಿನಿಯರ್‌ಗಳ ತಂಡ, ಹೆಚ್ಚು ನೀರನ್ನು ಸಂಗ್ರಹಿಸಬೇಕೆಂದರೆ ಕೆರೆಯ ಹೂಳೆತ್ತುವಂತೆ ಸಲಹೆ ನೀಡಿದರು. ಕೆರೆಯ ವಿಸ್ತೀರ್ಣ ನೀರಿನ ಧಾರಣಾ ಸಾಮರ್ಥ್ಯಕ್ಕೆ ಸಮಾನವಾಗಿದ್ದರೆ ಕೆರೆಯ ಕೋಡಿಯನ್ನು ಎತ್ತರಿಸುವ ಅಗತ್ಯವಿಲ್ಲ ಎಂದರು.

ಬೆಂಗಳೂರು ಇಂಜಿನಿಯರ್‌ಗಳ ತಂಡವು ಸ್ಥಳದಲ್ಲಿದ್ದ ಸಣ್ಣ ನೀರಾವರಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರ ಮುನೀರ್ ಅಹಮ್ಮದ್ ಪಾಶಾ ಅವರಿಗೆ ಎಲ್ಲಾ ತಾಂತ್ರಿಕ ಮತ್ತು ಕೆರೆಯ ಪುನಶ್ಚೇತನಕ್ಕೆ ಅಗತ್ಯವಾಗಿ ಬೇಕಿದ್ದ ಸಲಹೆಗಳನ್ನು ವಿವರಿಸಿ ತಿಳಿಸಿತು.

ಸ್ಥಳ ವೀಕ್ಷಣೆಯ ಸಂದರ್ಭದಲ್ಲಿ ಹಸಿರು ಭೂಮಿ ಪ್ರತಿಷ್ಠಾನದ ಹಾಗೂ ಹಿರಿಯ ನಾಗರಿಕ ವೇದಿಕೆಯ ಪ್ರಮುಖರಾದ ತಿರುಪತಿಹಳ್ಳಿ ಶಿವಶಂಕರಪ್ಪ, ನಿವೃತ್ತ ಇಂಜಿನಿಯರ್ ಸುಬ್ಬಸ್ವಾಮಿ, ಪಿ.ಪುಟ್ಟಯ್ಯ, ಪ್ರೊ॥ರಮೇಶ್, ಹಿರಿಯಾಳು ಚಂದ್ರೇಗೌಡ, ಮಂಜುನಾಥ ಮೋರೆ, ತಿಮ್ಮೇಶ್ ಪ್ರಭು, ಕಲಾವಿದ ಬಿ.ಎಸ್.ದೇಸಾಯಿ, ಎಸ್.ಎಸ್.ಪಾಷಾ ಮತ್ತಿತರರು ಜೊತೆಯಲ್ಲಿದ್ದರು. ನಗರದಲ್ಲಿ ಕುಡಿಯುವ ನೀರಿನ ತೊಂದರೆ ಹಾಗೂ ಅಂತರ್ಜಲ ಕುಸಿದಿರುವ ಬಗ್ಗೆ ಅವರುಗಳು ಇಂಜಿನಿಯರ್ ತಂಡದ ಗಮನಕ್ಕೆ ತಂದರು.

4 ತಿಂಗಳಲ್ಲಿ ಎತ್ತಿನಹೊಳೆ ಕಾಮಗಾರಿ ಮುಕ್ತಾಯ ಸಾಧ್ಯವೇ? : ರೇವಣ್ಣ ಪ್ರಶ್ನೆ

ಹಾಸನ : ಕಳೆದ ನಾಲ್ಕೂವರೆ ವರ್ಷಗಳಿಂದ ಆರಂಭಗೊಂಡ ಎತ್ತಿನಹೊಳೆ ಯೋಜನೆ ಕಾಮಗಾರಿಯನ್ನು ಬರುವ ಮುಂದಿನ 120 ದಿನಗಳಲ್ಲಿ ಮುಗಿಸಲು ಸಾಧ್ಯವೇ? ಎಂದು ಮಾಜಿ ಸಚಿವ ಹಾಗೂ ಶಾಸಕ ಹೆಚ್.ಡಿ.ರೇವಣ್ಣ ಪ್ರಶ್ನಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, ಹಲವು ವರ್ಷಗಳಿಂದ ಹೇಮಾವತಿ ಯೋಜನೆ ಅಚ್ಚುಕಟ್ಟು ಪ್ರದೇಶಕ್ಕೆ ನೀರು ಹರಿಸದೆ ರೈತರಿಗೆ ದ್ರೋಹ ಬಗೆದ ರಾಜ್ಯದ ಕಾಂಗ್ರೆಸ್ ಸರ್ಕಾರ ಈಗ ಎತ್ತಿನಹೊಳೆ ಯೋಜನೆಯ ನೀರು ಹರಿಸುವ ರಾಜಕೀಯ ಗಿಮಿಕ್ ಮಾಡುತ್ತಿದೆ ಎಂದು ಆರೋಪಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜ.4ರಂದು ಜಿಲ್ಲೆಯ ಮೂರು ವಿಧಾನಸಭಾ ಕ್ಷೇತ್ರಗಳಲ್ಲಿ ಸಾಧನಾ ಸಮಾವೇಶ ಮಾಡಿ ಎತ್ತಿನಹೊಳೆ ಯೋಜನೆಯ ನೀರನ್ನು ಹರಿಸಿಯೇ ಸಿದ್ಧ ಎಂದು ಹೇಳಿ, ಬೇಲೂರು ಮತ್ತು ಅರಸೀಕೆರೆ ವಿಧಾನಸಭಾ ಕ್ಷೇತ್ರಗಳಲ್ಲಿ ಸುಮಾರು 2000 ಕೋಟಿ ರೂ. ನಾಲಾ ಕಾಮಗಾರಿ ಆರಂಭಿಸಲು ಶಿಲಾನ್ಯಾಸ ಮಾಡಿ ಹೋಗಿದ್ದಾರೆ. ಎತ್ತಿನಹೊಳೆ ಯೋಜನೆಯ ನೀರು ಹರಿಸಲಿ. ನಾವು ಬೇಡ ಅನ್ನುವುದಿಲ್ಲ. ಆದರೆ ಕಳೆದ ನಾಲ್ಕೂವರೆ ವರ್ಷ ಸುಮ್ಮನಿದ್ದವರು ಈಗ ಚುನಾವಣೆಯ ಸಂದರ್ಭದಲ್ಲಿ ಎತ್ತಿನಹೊಳೆ ಯೋಜನೆಯನ್ನು ರಾಜಕೀಯಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಕಳೆದ ಮೂರು ವರ್ಷಗಳಿಂದ ಹೇಮಾವತಿ ಅಚ್ಚುಕಟ್ಟು ಪ್ರದೇಶದ ಬೆಳೆಗೆ ನೀರು ಹರಿಸದೆ ಏಕೆ ರೈತರಿಗೆ ಅನ್ಯಾಯ ಮಾಡಿದರು ಎಂದು ಉತ್ತರಿಸಲಿ ಎಂದು ತರಾಟೆಗೆ ತೆಗೆದುಕೊಂಡರು.

ಹೇಮಾವತಿ ಯೋಜನೆಯಿಂದ 7 ಲಕ್ಷ ಎಕರೆಗೆ ನೀರು ಹರಿಸಬೇಕಾಗಿದ್ದು, ಪ್ರತಿ ವರ್ಷ 60 ಟಿಎಂಸಿ ಅಡಿ ನೀರು ಬಳಸಿಕೊಳ್ಳಬೇಕಾಗಿದೆ. ಕಾವೇರಿ ನ್ಯಾಯ ಮಂಡಳಿಯೇ 43 ಟಿಎಂಸಿ ಅಡಿ ನೀರು ಬಳಸಿಕೊಳ್ಳಲು ಅವಕಾಶ ನೀಡಿದೆ. ಕಳೆದ ಮೂರು ವರ್ಷಗಳಲ್ಲಿ ಸರಾಸರಿ 38 ಟಿಎಂಸಿ ಅಡಿ ನೀರು ಹೇಮಾವತಿ ಜಲಾಶಯಕ್ಕೆ ಬಂದಿದೆ. ಅದರಲ್ಲಿ ತಮಿಳುನಾಡಿಗೆ 30 ಟಿಎಂಸಿ ಅಡಿ ಬಿಟ್ಟು ಹೇಮಾವತಿ ಅಚ್ಚುಕಟ್ಟು ಪ್ರದೇಶದಲ್ಲಿ ಕೇವಲ 11 ಟಿಎಂಸಿ ಅಡಿಯಷ್ಟನ್ನು ಮಾತ್ರ ಬಳಸಿಕೊಂಡು ಬೆಳೆಗೆ ನೀರು ಕೊಡದೆ ಹಾಸನ ಜಿಲ್ಲೆ ಸೇರಿದಂತೆ ಹೇಮಾವತಿ ಅಚ್ಚುಕಟ್ಟು ಪ್ರದೇಶದ ರೈತರಿಗೆ ರಾಜ್ಯದ ಕಾಂಗ್ರೆಸ್ ಸರ್ಕಾರ ದ್ರೋಹ ಬಗೆದಿದೆ. ಭಂಡತನದಿಂದ ಸಾಧನಾ ಸಮಾವೇಶ ನಡೆಸಿ, ಎತ್ತಿನಹೊಳೆ ಯೋಜನೆ ತೋರಿಸಿ ರೈತರ ಮೂಗಿಗೆ ತುಪ್ಪ ಹಚ್ಚುವ ಹುನ್ನಾರ ನಡೆಸಿದೆ ಎಂದರು.

(-4ನೇ ಪುಟಕ್ಕೆ)

‘ಡಿ.ಸಿ. ವರ್ಗಾವಣೆಗೆ ಕಾಂಗ್ರೆಸ್ ಪಿತೂರಿ’

ಹಾಸನ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಶಿಸ್ತು, ಪ್ರಾಮಾಣಿಕ ಅಧಿಕಾರಿ. ಮೇಯಲು ಅವಕಾಶ ನೀಡಲಿಲ್ಲವೆಂದು ಅಂತಹ ದಕ್ಷ ಅಧಿಕಾರಿಯನ್ನೇ ವರ್ಗಾವಣೆ ಮಾಡಿಸಲು ಕಾಂಗ್ರೆಸ್ ಮುಖಂಡರು ಮುಂದಾಗಿದ್ದಾರೆಂದು ಜೆಡಿಎಸ್ ಮುಖಂಡ, ಮಾಜಿ ಸಚಿವ ಎಚ್.ಡಿ.ರೇವಣ್ಣ ಆರೋಪಿಸಿದರು.

ರೋಹಿಣಿ ಸಿಂಧೂರಿ ಅವರು ಜಿಲ್ಲಾಧಿಕಾರಿಯಾಗಿ ಬಂದ ನಂತರವೇ ಶ್ರವಣಬೆಳಗೊಳದ ಮಹಾಮಸ್ತಕಾಭಿಷೇಕದ ಸಿದ್ಧತಾ ಕೆಲಸಗಳು ಚುರುಕುಗೊಂಡವು. ಕಾನೂನು ಪ್ರಕಾರ ಜಿಲ್ಲಾಧಿಕಾರಿಯವರು ಕೆಲಸ ಮಾಡುತ್ತಿದ್ದಾರೆ. ತಾವಾಗಲಿ, ಜೆಡಿಎಸ್‌ನ ಯಾವುದೇ ಮುಖಂಡರು ಜಿಲ್ಲಾಧಿಕಾರಿ ಕಚೇರಿಗೆ ಹೋಗಿಲ್ಲ. ಯಾವುದೇ ಕೆಲಸ ಮಾಡಿಸಿಕೊಂಡಿಲ್ಲ. ಹಾಸನಾಂಬ ಜಾತ್ರಾ ಮಹೋತ್ಸವದಲ್ಲಿ ಅರ್ಚಕ ಅಣ್ಣಯ್ಯಭಟ್ಟ ಅವರನ್ನು ಪೂಜೆಗೆ ನೇಮಿಸಿಕೊಳ್ಳಿ ಎಂದು ಒತ್ತಾಯಿಸಿದ್ದೆ. ಆದರೆ ಅದನ್ನೂ ಜಿಲ್ಲಾಧಿಕಾರಿಯವರು ಮಾಡಲಿಲ್ಲ. ಹಾಗೆಂದು ನಾನು ಅವರನ್ನು ವಿರೋಧಿಸಲಿಲ್ಲ. ಆದರೆ ಈಗ ಕಾಂಗ್ರೆಸ್ಸಿನ ಕೆಲವು ಮುಖಂಡರು ‘ಮೇವು’ ಮೇಯಲು ಡಿ.ಸಿ. ಬಿಡುತ್ತಿಲ್ಲವೆಂದು ವರ್ಗಾವಣೆ ಮಾಡಿಸಲು ಮುಂದಾಗಿದ್ದಾರೆ ಎಂದು ವ್ಯಂಗ್ಯವಾಡಿದರು.

‘ಮಕ್ಕಳ ಶಿಕ್ಷಣಕ್ಕಾಗಿ ಹೆಚ್ಚಿನ ಒಲವು ತೋರಿಸಿ’

ಹಾಸನ : ಯಾವುದೇ ಸಮಾಜ ಸದೃಢವಾಗಬೇಕಾದರೆ ಆರ್ಥಿಕವಾಗಿ ಉತ್ತಮವಾಗಿರಬೇಕು. ಶೈಕ್ಷಣಿಕ, ಸಾಮಾಜಿಕ ಹಾಗೂ ರಾಜಕೀಯವಾಗಿ ಮೇಲೆ ಬಂದರೆ ಮಾತ್ರ ಆ ಸಮಾಜ ಗುರುತಿಸಿಕೊಳ್ಳಲು ಸಾಧ್ಯ ಎಂದು ಜಿಲ್ಲಾ ಗಾಣಿಗರ ಸಂಘದ ಅಧ್ಯಕ್ಷ ಹೆಚ್.ಸಿ.ಬಾಲಕೃಷ್ಣ ಕಿವಿಮಾತು ಹೇಳಿದರು.

ನಗರದ ಶಿವಜ್ಯೋತಿ ಕಲ್ಯಾಣ ಮಂಟಪದಲ್ಲಿ ಜಿಲ್ಲಾ ಗಾಣಿಗ ನೌಕರರ ಹಾಗೂ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗಾಣಿಗ ಸಮಾಜ ಸಣ್ಣ ಸಮಾಜ. ಆದರೂ ಅನೇಕ ತೊಡಕುಗಳನ್ನು ಎದುರಿಸುತ್ತಿದೆ. ಗಾಣಿಗರ ಸಮಾಜಕ್ಕಿಂತ ಇತರೆ ಸಮಾಜಗಳು ಸಾಕಷ್ಟು ಸದೃಢವಾಗಿವೆ. ಈ ನಿಟ್ಟಿನಲ್ಲಿ ನಮ್ಮ ಸಮಾಜದವರು ಪ್ರತಿ ಮಕ್ಕಳಿಗೂ ಶಿಕ್ಷಣ ನೀಡುವ ನಿಟ್ಟಿನಲ್ಲಿ ಹೆಚ್ಚಿನ ಒಲವು ತೋರಿಸಬೇಕಾಗಿದೆ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಎಸ್.ಎಸ್.ಎಲ್.ಸಿ. ಹಾಗೂ ಇತರೆ ಶಿಕ್ಷಣದಲ್ಲಿ ಹೆಚ್ಚಿನ ಅಂಕ ಪಡೆದವರಿಗೆ ಸನ್ಮಾನಿಸಲಾಯಿತು.

ಜಿಲ್ಲಾ ಗಾಣಿಗ ಸಂಘದ ಉಪಾಧ್ಯಕ್ಷ ನಟರಾಜು, ಪ್ರಧಾನ ಕಾರ್ಯದರ್ಶಿ ಹೆಚ್.ಕೆ.ಪಾಂಡುರಂಗ, ಖಜಾಂಚಿ ಆರ್.ವಿಜಯಕುಮಾರ್, ಸಹ ಕಾರ್ಯದರ್ಶಿ ಹಂಸ, ಕಾನೂನು ಸಲಹೆಗಾರ ಹೆಚ್.ವಿ.ಮಹದೇವು, ಹೆಚ್.ಎಲ್. ರಂಗಶೆಟ್ಟಿ, ಹೆಚ್.ಸಿ.ವೇಣುಗೋಪಾಲ್, ಡಾ॥ರಾಜ್‌ಕುಮಾರ್ ಅಭಿಮಾನಿ ಸಂಘದ ಅಧ್ಯಕ್ಷ ಪ್ರಶಾಂತ್, ಬಿ.ಕೆ.ನಂದಕುಮಾರ್, ಅರುಣ್ ಕುಮಾರ್ ಇತರರು ಇದ್ದರು.

ಆರ್ಯ ವೈಶ್ಯರು ಸಮಾಜಮುಖಿ ಕೆಲಸ ಮಾಡುತ್ತಿದ್ದಾರೆ

ಮಾನ್ಯರೇ,

ಆರ್ಯ ವೈಶ್ಯ ಜನಾಂಗದ ಬಗ್ಗೆ ಜ್ಞಾನ ಮತ್ತು ತಿಳಿವಳಿಕೆ ಇಲ್ಲದ ಮಹನೀಯರು ಅವೈಜ್ಞಾನಿಕವಾಗಿ ಮಾಡಿರುವ ಟೀಕೆಗಳು ಸತ್ಯಕ್ಕೆ ದೂರವಾದ ವಿಷಯ. ನಮ್ಮ ಆರ್ಯ ವೈಶ್ಯ ಜನಾಂಗದವರು ನೂರಾರು ವರ್ಷಗಳಿಂದ ಹಲವಾರು ಸಂಘ ಸಂಸ್ಥೆಗಳು, ವ್ಯವಹಾರೋದ್ಯಮಗಳು, ಧಾರ್ಮಿಕ ಹಾಗೂ ಶೈಕ್ಷಣಿಕ ಸಂಸ್ಥೆಗಳನ್ನು ಕಟ್ಟಿ ಸಾರ್ವಜನಿಕರಿಗಾಗಿ ಸೇವೆ ಸಲ್ಲಿಸುತ್ತಿದ್ದಾರೆ ಹಾಗೂ ಸಾವಿರಾರು ಮಂದಿಗೆ ತಮ್ಮ ವ್ಯಾಪಾರೋದ್ಯಮಗಳ ಮುಖಾಂತರ ಉದ್ಯೋಗಾವಕಾಶಗಳನ್ನು ಕಲ್ಪಿಸಿ ಅವರುಗಳ ಜೀವನಕ್ಕೆ ಆಧಾರವಾಗಿದ್ದಾರೆ.

ಸಂಜೀವಿನಿ ಸಹಕಾರಿ ಆಸ್ಪತ್ರೆ, ಕಾಮಧೇನು ವೃದ್ಧಾಶ್ರಮ, ಶ್ರೀ ಶಿರಡಿ ಸಾಯಿಬಾಬಾ ಸೇವಾ ಸಮಿತಿ, ಗಣಪತಿ ಪೆಂಡಾಲ್, ಮಾವಿನಕೆರೆ ಛತ್ರ ಹಾಗೂ ನೂರಾರು ಸೇವಾ ಸಂಸ್ಥೆಗಳ ಮೂಲಕ ಅತೀ ಹೆಚ್ಚಿನ ಪ್ರಮಾಣದಲ್ಲಿ ಸಮಾಜಕ್ಕೆ ಸೇವೆ ಸಲ್ಲಿಸುತ್ತಿದ್ದಾರೆ. ಅಲ್ಲದೇ ತಮ್ಮದೇ ಆದ ಸಂಸ್ಥೆಗಳನ್ನು ನೂರಾರು ವರ್ಷಗಳ ಹಿಂದೆಯೇ ಪ್ರಾರಂಭಿಸಿ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಉದಾಹರಣೆಗೆ ಶ್ರೀ ಕನ್ನಿಕಾಪರಮೇಶ್ವರಿ ಸಹಕಾರಿ ಬ್ಯಾಂಕ್, ವಾಸವಿ ಇಂಗ್ಲೀಷ್ ಶಾಲೆ, ವಾಸವಿ ಐ ಬ್ಯಾಂಕ್ ಇದೇ ರೀತಿ ಹಲವಾರು ಸಂಘ ಸಂಸ್ಥೆಗಳನ್ನು ಸ್ಥಾಪಿಸಿ ತಮ್ಮ ಅಮೂಲ್ಯ ಕೊಡುಗೆಯನ್ನು ಸಕಲರಿಗೂ ನೀಡುತ್ತಿದ್ದರೂ ಸಹ ಯಾವುದೇ ಫಲಾಪೇಕ್ಷೆಯನ್ನು ನಿರೀಕ್ಷಿಸುತ್ತಿಲ್ಲ.

ಆರ್ಯ ವೈಶ್ಯರು ಪ್ರಚಾರಪ್ರಿಯರಲ್ಲದಿರುವುದರಿಂದ ಸಮಾಜಕ್ಕೆ ಸಲ್ಲಿಸಿರುವ ಗಣನೀಯ ಸೇವೆಗಳು ಬಹುಶಃ ಕೆಲವರ ಗಣನೆಗೆ ಬಂದಿಲ್ಲವೆಂಬ ಅಂಶವು ದಿನಾಂಕ 6-1-2018ರಂದು ಪತ್ರಿಕೆಯಲ್ಲಿ ಪ್ರಕಟಗೊಂಡ ಸುದ್ದಿಯಿಂದ ವೇದ್ಯವಾಗುತ್ತದೆ. ಅಂದು ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿ ಮತ್ತು ಅಭಿಪ್ರಾಯಗಳು ವಾಸ್ತವಾಂಶಕ್ಕೆ ದೂರವಾಗಿದ್ದು, ನಮ್ಮ ಆರ್ಯ ವೈಶ್ಯ ಜನಾಂಗವು ಬರಹವನ್ನು ಪ್ರತಿಭಟಿಸುತ್ತದೆ ಹಾಗೂ ಖಂಡಿಸುತ್ತದೆ.

-ಶ್ರೀ ಕನ್ನಿಕಾಪರಮೇಶ್ವರಿ ಟೆಂಪಲ್ ಟ್ರಸ್ಟ್, ಆರ್ಯ ವೈಶ್ಯ ಮಂಡಳಿ, ಹಾಸನ.

ಮಾಡುವ ಕಾಯಕದಿಂದಲೇ ನಮ್ಮ ಭವಿಷ್ಯ ನಿರ್ಧಾರ

- ಪುಣ್ಯ ಭೂಮಿಯಲ್ಲಿ ಜೈವಿಕ ಕೃಷಿ ಮೇಳ
- ಸಂಯುಕ್ತ ಬೆಳೆಗಳ ದೀರ್ಘಾವಧಿ ಕೃಷಿಯಿಂದ ರೈತರ ಸಫಲತೆ ಸಾಧ್ಯ
- ಹಣ ಗಳಿಕೆಯ ಮರಗಳನ್ನು ಬೆಳೆಸುವಲ್ಲಿ ಒಲವು ಇರಲಿ
- ಹಂತ ಹಂತವಾಗಿ ಕೃಷಿ ಮೇಲ್ದರ್ಜೆಗೇರಿಸಿ ಶ್ರೀಮಂತರಾಗಿ

ಆಲೂರು : ರೈತರು ಪ್ರಕೃತಿ ಹಾಗೂ ಕೃಷಿಯನ್ನು ನಂಬಿದವರು. ನಾವು ಮಾಡುವ ಕಾಯಕದಿಂದಲೇ ನಮ್ಮ ಮುಂದಿನ ಭವಿಷ್ಯ ನಿರ್ಧಾರವಾಗುತ್ತದೆ ಎಂದು ಬಳ್ಳಾರಿಯ ಪ್ರಗತಿಪರ ರೈತ ಸಜ್ಜನ್ ತಿಳಿಸಿದರು.

ಭಾನುವಾರ ಪುಣ್ಯಭೂಮಿಯಲ್ಲಿ ನಡೆದ ಜೈವಿಕ ಮೇಳದಲ್ಲಿ ಬಳ್ಳಾರಿಯ ಪ್ರಗತಿಪರ ಕೃಷಿಕ ಸಜ್ಜನ್ ಮಾತನಾಡಿದರು.

ರೈತರು ಬೆಳೆದ ಸಾವಯವ ಆಹಾರ ಪದಾರ್ಥಗಳನ್ನು ಮಾರಾಟ ಮಳಿಗೆಗಳಲ್ಲಿ ಮಾರಾಟ ಮಾಡುತ್ತಿರುವುದು.

ಪಟ್ಟಣದ ಭರತವಳ್ಳಿಯ ಪುಣ್ಯ ಭೂಮಿಯಲ್ಲಿ ಭಾನುವಾರ ನಡೆದ ಜೈವಿಕ ಮೇಳದ ಎರಡನೇ ದಿನದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಖರಾಬು ಎಂದು ಹಾಳು ಬಿಟ್ಟಿದ್ದ ಭೂಮಿಯಲ್ಲೇ ನಾನು ಬೇಲದ ಹಣ್ಣುಗಳ ಕೃಷಿ ಮಾಡಿ ಸಫಲನಾಗಿದ್ದು, ಲಕ್ಷಾಂತರ ರೂ.ಗಳನ್ನು ಸಂಪಾದಿಸಿದ್ದೇನೆ. ಪ್ರಾಕೃತಿಕ ಕೃಷಿಯಂತೆ ಮರ ಕೃಷಿಯಲ್ಲೂ ತೊಡಗಿಸಿಕೊಂಡು ನೀರಿನ ಸಂರಕ್ಷಣೆ ಹಾಗೂ ಸಂಯುಕ್ತ ಬೆಳೆಗಳ ಮೂಲಕ ದೀರ್ಘಾವಧಿ ಕೃಷಿಯಲ್ಲಿ ರೈತರು ಸಫಲತೆಯನ್ನು ಕಾಣಬಹುದು ಎಂದು ಸಲಹೆ ನೀಡಿದರು.

ಇಂದಿನ ಕಾಲದಲ್ಲಿ ವಾಯುಮಾಲಿನ್ಯ ಅತೀ ಹೆಚ್ಚಿದ್ದು, ಮುಂದಿನ ಕೃಷಿ ದಿಕ್ಕು ಉಸಿರು ಕ್ರಾಂತಿಯಾಗಬೇಕು. ಬೆಂಗಳೂರಿನಲ್ಲಿ 70 ಲಕ್ಷ ನೋಂದಣಿ ವಾಹನಗಳಿದ್ದು, ಅಲ್ಲಿ ಯಾವ ರೀತಿಯ ವಾಯುಮಾಲಿನ್ಯ ಇದೆ ಎಂಬುದನ್ನು ಹೇಳಲು ಅಸಾಧ್ಯ. ಇಲ್ಲಿ ಮರಗಿಡಗಳ ಸಂಖ್ಯೆ ಕಡಿಮೆ ಇದೆ ಎಂದರು.

ಕೆನಡಾದಲ್ಲಿ ವ್ಯಕ್ತಿಯೊಬ್ಬನಿಗೆ 8000 ಮರಗಳಿವೆ. ಅಮೇರಿಕಾದಲ್ಲಿ 4000, ಚೀನಾದಲ್ಲಿ 200 ಇದೆ. ಆದರೆ ಭಾರತದಲ್ಲಿ ವ್ಯಕ್ತಿಯೊಬ್ಬನಿಗೆ 28 ಮರಗಿಡಗಳಿದ್ದು, ಇದು ಚಿಂತಾಜನಕ ವಿಷಯವಾಗಿದೆ. ನಮ್ಮ ದೇಶದಲ್ಲಿ ಪರಿಸರಕ್ಕೆ ಉಪಯೋಗಕಾರಿ ಮತ್ತು ಹಣ ಗಳಿಕೆಗೆ ಸಹಕಾರಿಯಾದ ಸಾಕಷ್ಟು ಮರಗಳಿವೆ. ಅವುಗಳನ್ನು ಬೆಳೆಸುವತ್ತ ರೈತರು ಒಲವು ತೋರಬೇಕೆಂದರು.

ಕೆಲವರು ಹೆಚ್ಚೆಚ್ಚು ಹಣ, ಆಸ್ತಿ ಸಂಪಾದನೆ, ದೊಡ್ಡ ದೊಡ್ಡ ಅಪಾರ್ಟ್‌ಮೆಂಟ್ ನಿರ್ಮಾಣ ಮಾಡುವ ಕುರಿತು ತೀವ್ರ ಆಸಕ್ತಿ ಹೊಂದಿರುತ್ತಾರೆ. ಹಾಗೆಯೇ ರೈತರೂ ಸಹ ತಮ್ಮ ಕೃಷಿಯನ್ನು ಹಂತ ಹಂತವಾಗಿ ಮೇಲ್ದರ್ಜೆಗೆ ಏರಿಸಿಕೊಳ್ಳುವ ಮೂಲಕ ಶ್ರೀಮಂತ ಕೃಷಿಕರಾಗಬೇಕು ಎಂದರು.

ನಮ್ಮ ಭಾಗದಲ್ಲಿ ಲೀಟರ್ ಹಾಲನ್ನು 25 ರೂ.ನಂತೆ ಕೆ.ಎಂ.ಎಫ್.ನವರು ಖರೀದಿಸುತ್ತಿದ್ದು, ಬೆಂಗಳೂರಿನಲ್ಲಿ ಇದೇ ಹಾಲು 80 ರೂ.ಗೆ ಮಾರಾಟವಾಗುತ್ತಿದೆ. ಆದ್ದರಿಂದ ಹಾಲು ಮಾರಾಟ ನಿಲ್ಲಿಸಿ ಪೇಡಾ, ತುಪ್ಪ ಮುಂತಾದ ವಸ್ತುಗಳನ್ನು ತಯಾರಿಸಿ, ವಸ್ತುಗಳ ಮೌಲ್ಯವರ್ಧನೆಯಿಂದ ಲಾಭ ಮಾಡುವುದನ್ನು ಕಲಿತಿದ್ದೇನೆ ಎಂದರು.

(-4ನೇ ಪುಟಕ್ಕೆ)